Mr. SPEAKER.—Not on matters of procedure also. I am sorry, I cannot give my consent to the adjournment motion. I disallow it.

BUSINESS ADVISORY COMMITTEE.

Presentation of Second Report.

Mr. SPEAKER.—I present the second Report of the Business Advisory Committee.

Sri L. H. THIMMA BOVI (Deputy Speaker and Member of the Business Advisory Committee).—Sir, I beg to move :

> " That thisAssembly agrees with the Second Report of the Business Advisory Committee."

Mr. SPEAKER.—Motion moved :

> " That this Assembly agrees with the Second Report of the Business Advisory Committee."

*Sri M. C. NARASIMHAN (Kolar Gold Fields).—On a point of order, Sir. The particular motion which the Deputy Speaker has been called upon to make has not been included in the original order paper dated the 14th September which was circulated to the members. I presume that this business was fixed after discussion in the Business Advisory Committee. That was also approved of the other day by this House. So, may I take it that this is a further amendment, and, if so, would it be in order to make such an amendment. The proper procedure would have been to make this motion after 21st September 1957 up to which date we have already got a programme.

Mr. SPEAKER.—After all the first report gave a calendar up to 21st of this month and this report gives a calendar from the 25th September to 5th October 1957. I do not see any force in the arguments advanced by my friend Sri Narasimhan. So far as the business of today is concerned, it is included in the agenda itself.

Sri C. J. MUCKANNAPPA (Gubbi).—Can it be altered ?

Mr. SPEAKER.—Yes. I can issue a modified one.

Sri C. J. MUCKANNAPPA.—Can the Speaker *suo motu* alter the report of the Business Advisory Committee which has been sanctioned by this House and according to which the business has been conducted ? Today, we are deviating from it.

Mr. SPEAKER.—We are not deviating at all. The first report was up to 21st September 1957 and this report is in respect of the business commencing from the 25th September. There is absolutely no contradiction.

Sri M. C. NARASIMHAN.—My only suggestion is that this motion could have been brought on the 21st September since we have a programme up to that date.

Mr. SPEAKER.—It does not matter if it is brought today, because Hon'ble Members can adjust their programmes. I do not see any difficulty.

Sri K. KENCHAPPA (Hiriyur).—Are we to take it that the Mysore Irrigation (Levy of Betterment Contribution and Water Rate) Bill, 1957 will be discussed on 27th September 1957 in addition to the time allotted to it already ?

Mr. SPEAKER.—It will be discussed today, tomorrow and again on the 27th. So, obviously there is no contradiction.

Sri V. P. DEENADAYALU NAIDU (Cubbonpet).—Sir, in this time-table there is a very serious omission. I have received from the Hon'ble Speaker a reply that the motion for half an hour discussion is permitted and the Chair was also kind enough to indicate it to me by communication. I say such matters which have been provided in the Rules have been completely given a go by while taking into consideration the time-table. I do not know what happens to those short notice questions and the discussion thereon. They have been permitted and you have been good enough to tell me that they would be taken up and it is only a matter of fixing up the time. Such matters are completely forgotten. Or are we to take it that we will not have an occasion to discuss some of those matters ?

Mr. SPEAKER.—That is a different matter. That has nothing to do with the subject before the House. If it is the view of the Hon'ble Member that

[MR. SPEAKER]

I should not forget the half hour discussion, I may say that certainly I have not forgotten it. I have only to find time for it. I am going to fix a time for it.

ಶ್ರೀ ಕೆ. ಕೆಂಚಪ್ಪ.—ಮೊದಲೇ ನಾವು ತೀರ್ಮಾನ ಮಾಡಿದ ಪ್ರಕಾರ ನಿನ್ನೆ, ಇವತ್ತು ಪೂರಾ, ನಾಳೆ ಸ್ವಲ್ಪ ಕಾಲ ಬೆಟರ್‌ಮೆಂಟ್ ಕಾಂಟ್ರಿಬ್ಯೂಷ್ಷ ಅಂಡ್ ವಾಟರ್ ರೇಟ್ ಬಿಲ್ಲಿನ ಮೇಲೆ ಮಾತನಾಡತಕ್ಕದ್ದು ಇತ್ತು. ಹಿಂದಿನ ವೇಳಾಪಟ್ಟಿಯ ಪ್ರಕಾರ ಇವೊತ್ತಿನ ದಿವಸ ಪೂರಾ ಬೆಟರ್‌ಮೆಂಟ್ ಕಾಂಟ್ರಿಬ್ಯೂಷ್ಷ ಅಂಡ್ ವಾಟರ್ ರೇಟ್ ಬಿಲ್ಲಿನ ಮೇಲೆ ಮಾತನಾಡುವುದು ಇತ್ತು. ಆದರೆ ಇವತ್ತಿನ ವೇಳಾ ಪಟ್ಟಿಯನ್ನು ನೋಡಿದ್ದಲ್ಲಿ ಮೈಸೂರು ಯೂನಿವರ್ಸಿಟಿ ಸೆಕೆಂಡ್ ಅಮೆಂಡ್‌ಮೆಂಟ್ ಬಿಲ್ಲು ಒಂದು. . . . .

ಅಧ್ಯಕ್ಷರು.—ಬರೀ ಇಂಟ್ರೊಡಕ್ಷ್ಷ ಒಂದೇ. . . .

ಶ್ರೀ ಕೆ. ಕೆಂಚಪ್ಪ.—ಇಂಟ್ರೊಡಕ್ಷ್ಷ ಆಗಲಿ, ಏನೇ ಆಗಲಿ. ವೇಳೆಯ ಪ್ರಶ್ನೆ ಇಲ್ಲಿ ಬರುತ್ತದೆ. . . . .

ಅಧ್ಯಕ್ಷರು.—ಮೂರೂವರೆ ಘಂಟೆ ಬೇಕೆಂದರೂ ಕೊಡುತ್ತೇನೆ. Introduction of Bills ಮಾಡ ಬಾರದು ಎಂದು ಇಲ್ಲ. Introduction of Bills can be made.

ಶ್ರೀ ಕೆ. ಕೆಂಚಪ್ಪ.—ಇವೊತ್ತಿನ ದಿವಸ ಮೂರೂವರೆ ಘಂಟೆ, ನಾಳೆ. . . . .

ಅಧ್ಯಕ್ಷರು.—ನಾಳೆಯ ದಿವಸ ಎರಡು ಘಂಟೆ.

ಶ್ರೀ ಕೆ. ಕೆಂಚಪ್ಪ.—ಹೀಗೆಯೇ ಮುಂದಕ್ಕೆ ಹೋಗುತ್ತಾ ಇದೆ. . . . .

ಅಧ್ಯಕ್ಷರು.—ಹೀಗೆ ಹೇಳುತ್ತಾ, ಮಾತನಾಡುತ್ತಾ ಇರುವವರೇ ನೀವು, ವೇಳೆ ಕಳೆದ ಮೇಲೆ ಆಗುವ ತಪ್ಪೆಲ್ಲಾ ನನ್ನ ಮೇಲೆ, ಒಳ್ಳೆ ಲೆಕ್ಕಾಚಾರ! ವೇಳೆಗೆ ಸರಿಯಾಗಿ ಮುಗಿಸದಿದ್ದರೆ ಏನು ಮಾಡುವುದ ಕ್ಕಾಗುತ್ತದೆ? ಸ್ವಲ್ಪ ವಿಚಾರ ಮಾಡಿ. ನಿನ್ನೆ ಸ್ವಲ್ಪ ಕಾಲ ಮಾತನಾಡಿ ಮುಗಿಸಬೇಕಾಗಿತ್ತು. ಮುಗಿಸ ಲಿಲ್ಲ. ಹೀಗೆ ಮಾತನಾಡುತ್ತಾ ಹೋದರೆ ವೇಳೆ ಆಗುತ್ತದೆ. ಇವತ್ತು, ನಾಳೆ ಒಟ್ಟು ಎಷ್ಟು ಗಂಟೆ ಇದೆಯೋ ಅಷ್ಟು ಸಂಪೂರ್ಣವಾಗಿ ಕೊಡುತ್ತೇನೆ. ಹಾಗೆ ಪ್ರಸಂಗ ಬಂದರೆ ಯಾವುದಾದರೂ ಒಂದು ದಿವಸ ಬೆಳಿಗ್ಗೆ, ಸಾಯಂಕಾಲ ಕುಳಿತುಕೊಂಡು ಚರ್ಚೆ ಮಾಡು ವುದಕ್ಕೆ ಸಂಪೂರ್ಣ ಅವಕಾಶ ಕೊಡುತ್ತೇನೆ. ಈಗ ಏನಿದೆ ಎಂಬುದನ್ನು ವಿಚಾರ ಮಾಡಿ. ಮೂರೂವರೆ ಘಂಟೆ ಕಾಲ ಒಂದು ದಿವಸ, ಎರಡು ಗಂಟೆ ಕಾಲ ಒಂದು ದಿವಸ, ಒಂದೂವರೆ ಘಂಟೆ ಕಾಲ ಒಂದು ದಿವಸ ಹೀಗೆ ಏಳು ಘಂಟೆ ಕಾಲ ನಿಮಗೆ ಕೊಡುತ್ತೇನೆ.

ಶ್ರೀ ಕೆ. ಕೆಂಚಪ್ಪ.—ಮಾತನಾಡುವುದು ನಮ್ಮ ಕೆಲಸ; ಕಾಲಕ್ಕೆ ಸರಿಯಾಗಿ ಮಾತನಾಡುವುದನ್ನು ಮುಗಿಸುವುದು ತಮ್ಮ ಕೆಲಸ. . . .

ಅಧ್ಯಕ್ಷರು.—ಅದನ್ನು ಒಪ್ಪುವುದಕ್ಕಾಗುವುದಿಲ್ಲ, ತಾವು ನಿನ್ನೆಯ ದಿವಸ ಸಾಯಂಕಾಲ ಇಲ್ಲಿದ್ದಿದ್ದರೆ ಗೊತ್ತಾಗುತ್ತಿತ್ತು, ಒಂಭತ್ತು ಗಂಟೆಯವರೆಗೆ ಕೂಡೋಣವೆಂದು ಹೇಳುತ್ತಿದ್ದೆ.

ಶ್ರೀ ಕೆ. ಕೆಂಚಪ್ಪ. ಒಂದು ಗಂಟೆಯಿಂದ ಆರು ಗಂಟೆಯವರೆಗೆ ಸಭೆ ಕುಳಿತುಕೊಳ್ಳ ಬೇಕೆಂದು ನಿಗದಿ ಯಾಗಿದೆ, ಅದರ ಮೇಲೆ ನಾವು ಕುಳಿತುಕೊಳ್ಳುವುದ ಕ್ಕಾಗುವುದಿಲ್ಲ; ನಮಗೆ ಬೇರೆ ಕೆಲಸಗಳಿರುತ್ತವೆ.

(Sri H. M. Channabasappa rose.)

MR. SPEAKER.—The Hon'ble Member has to speak on the report.

Sri H. M. CHANNABASAPPA (Krishnarajanagar).—Why should the Chair presume even before I speak that I may not be relevant. If I am not relevant it is open to the Chair to say that what I speak is not relevant.

MR. SPEAKER.—It is my duty to remind members that they have to speak on this. If the Hon'ble Member wants to object to my doing my duty he is not reasonable.

Sri H. M. CHANNABASAPPA.—It is only when I speak something irrelevant it is open to the Chair that I am irrelevant.

MR. SPEAKER.—It is also my duty, before an Hon'ble Member begins to speak, to warn him that he has to speak on the motion before the House.

Sri H. M. CHANNABASAPPA.—It is an ordinary thing. The Hon'ble Members of this House know their duty.

MR. SPEAKER.—I also know my duty.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಿನ್ನೆಯ ದಿವಸ ಈ ಮಾನ್ಯ ಸಭೆಯಲ್ಲಿ. . . . .

MR. SPEAKER.—Only five minutes. The time given to every member is only five minutes.

Sri A. BHEEMPPA NAIK (Challakere).—Sir, unfortunately the order of this House seems to be 'most speaking.'

Sri C. K. RAJAIAH SHETTY (Chiknaikanahally).—Unfortunately, much of the time is taken by the Hon'ble Member Sri Bheemappa Naik himself.

MR. SPEAKER.—Order, order.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಿನ್ನೆಯ ದಿವಸ ಈ ಸಭೆಯಲ್ಲಿ Rules of Procedure ವಿಷಯವನ್ನು ತೆಗೆದುಕೊಂಡು ಪರಿಶೀಲನೆ ಮಾಡಿ ಮುಂಜೂರು ಮಾಡ ಬೇಕೆಂದು ಹೇಳಿ ಸದಸ್ಯರು ಅನೇಕ ಸಾರಿ ಒತ್ತಿ ಒತ್ತಿ ತಮ್ಮ ಗಮನಕ್ಕೆ ತಂದರು. ಅದಕ್ಕೆ States Reorganisation Actನ 32ನೆಯ ವಿಧಿಯ ಪ್ರಕಾರ...

MR. SPEAKER.—That is not relevant. The Hon'ble Member may speak on the motion before the House.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಸಭಾ ಸದಸ್ಯರು ಹೆಚ್ಚು ಹೆಚ್ಚು ಒತ್ತಾಯ ಪೂರ್ವಕವಾಗಿ ನಿನ್ನೆಯ ದಿವಸ. . . . .

MR. SPEAKER.—I tell you please for God's sake do not make those remarks,

It is a closed chapter. Speak on the report of the Business Advisory Committee.

Sri H. M. CHANNABASAPPA.—I am speaking on that.

Mr. SPEAKER.—I say what you are speaking is not relevant.

*ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಮಾನ್ಯ ಸಭೆಯಲ್ಲಿ ಸದಸ್ಯರು ಒತ್ತಿ ಒತ್ತಿ, ಹೇಳಿ, ತಮ್ಮ ಮನಸ್ಸಿನ ಮೇಲೆ ಮುದ್ರಿತವಾಗುವ ರೀತಿಯಲ್ಲಿ ಒತ್ತಾಯ ಮಾಡಿದರು. ಈಗ ಈ ವರದಿಯನ್ನು ನೋಡಿದರೆ, ಅಕ್ಟೋಬರ್ ನಾಲ್ಕನೆಯ ತಾರೀಕು 'Debate on food situation in the State' ಎಂದು ಹಾಕಿದ್ದಾರೆ. ನನಗೆ ತಿಳಿದ ಮಟ್ಟಿಗೆ, ಈ ವಿಷಯವನ್ನು ಚರ್ಚೆ ಮಾಡುವುದು ಅವಶ್ಯಕವೆಂದು ಹೇಳಿ ಯಾರಿಂದಲೂ ಒತ್ತಾಯ ಬಂದುದು ಕಾಣಿಲ್ಲ. ಈ ಸಂದರ್ಭದಲ್ಲಿ ನಾನು ಒಂದು ಪ್ರಶ್ನೆ ಮಾಡಬೇಕಾಗಿದೆ. ಅದೇನೆಂದರೆ, ತಾವು ಈ ಸಭೆಯ ಅಧ್ಯಕ್ಷರಾಗಿ, ಮಾನ್ಯ ಸದಸ್ಯರ ಅಭಿಪ್ರಾಯ ಅಥವಾ ಮನೋಗತ ವೇನಿದೆ ಎನ್ನುವುದನ್ನು ತಿಳಿದುಕೊಂಡು ಆ ವಿಷಯವನ್ನು ಆ ಸಮಿತಿಯಲ್ಲಿ ಚರ್ಚೆ ಮಾಡಿ, ಈ ಸಭೆಯ ಮಾನ್ಯ ಸದಸ್ಯರು Rules of Procedureಗೆ ಎಷ್ಟು ಮಹತ್ವ ಕೊಟ್ಟಿದ್ದಾರೆ, ಅದನ್ನೇಕೆ ತೆಗೆದುಕೊಂಡು ಚರ್ಚೆ ಮಾಡುವಾದು ಎ ಬುದನ್ನು ಆ ಸಮಿತಿಯ ಮುಂದಿಟ್ಟರೇ, ಆ ಸಮಿತಿ ಅದನ್ನು ತಳ್ಳಿಹಾಕಿದರೇ ಎಂಬುದನ್ನು ತಿಳಿಯುವುದಕ್ಕೆ ಕುತೂಹಲವುಳ್ಳವನಾಗಿದ್ದೇನೆ. ಒಂದು ವೇಳೆ ತಾವು ಹಾಗಿಟ್ಟಿದ್ದೂ ಆ ಸಮಿತಿ ಅದಕ್ಕೆ ಒಗುವುದಿಲ್ಲವೆಂದು ಹೇಳಿದ್ದರೆ ಚಿಂತೆಯಿಲ್ಲ. ಆ ವಿಷಯವನ್ನು ಅಧ್ಯಕ್ಷರಾಗಿ ತಾವು ನಮಗೆ ತಿಳಿಸಬೇಕು.

ಎರಡನೆಯದಾಗಿ, ಕಾಲಾವಕಾಶವಿಲ್ಲ, Rules of Procedure ತೆಗೆದುಕೊಂಡು ಚರ್ಚೆ ಮಾಡುವುದಕ್ಕಾಗುವುದಿಲ್ಲ ಎಂದು ತಾವು ಹೇಳಿದಿರಿ. ಇದನ್ನು finalise ಮಾಡುವುದಕ್ಕೆ ಒಂದು ದಿವಸವನ್ನು ಏಕೆ ಪೀಸಲಾಗಿಡಲಿಲ್ಲ ಎಂದು ನಮಗೆ ತಿಳಿಸಲಿಲ್ಲವಾದ ಕಾರಣ ನಮಗೆ ಇದನ್ನು ಪರಿಶೀಲಿಸಲು ಅವಕಾಶವಿಲ್ಲ. ಆದುದರಿಂದ ಅಧ್ಯಕ್ಷರಾದ ತಾವಾದರೂ ಈ ವಿಷಯವನ್ನೆಲ್ಲಾ ನಮಗೆ ತಿಳಿಸಿ ನಮ್ಮ ಮನಸ್ಸಿಗೆ ಶಾಂತಿಯನ್ನುಂಟುಮಾಡಬೇಕೆಂದು ನನ್ನ ಕೋರಿಕೆ ಈ ವಿಷಯ ಇದಕ್ಕೆ ಸಂಬಂಧಪಟ್ಟದ್ದು, irrelevant ಅಲ್ಲ ಎಂದು ಮಾತ್ರ ಹೇಳಿ ನಾನು ಕುಳಿತುಕೊಳ್ಳುತ್ತೇನೆ.

ಶ್ರೀ ಜಿ. ಅಣ್ಣಾರಾವ್ (ಅಫಜಲ್‌ಪುರ).–ಅಧ್ಯಕ್ಷರೆ, ನಿನ್ನೆ Business Advisory Committeeಯಲ್ಲಿ ಈ ವಿಷಯ ಕೂಲಂಕಪವಾಗಿ ಚರ್ಚೆಯಾಗಿ ಈ ನಿರ್ಣಯವನ್ನು ತೆಗೆದುಕೊಳ್ಳಲಾಯಿತು. Rules of Procedure ಸಭೆಯ ಮುಂದೆ ಬರಲಕ್ಕೆ ಬೇಕು, ಈ ಸಭೆಯಲ್ಲಿ ಅದನ್ನು ಅಂಗೀಕಾರ ಮಾಡಿದೆ ಮುಂದು ವರಿಯುವುದು ಬೇಡ, ಅದನ್ನು ಮಾಡುವುದು ಅಗತ್ಯ ಎಂದು ನನ್ನ ಮನಸ್ಸಿಗೂ ನಿನ್ನೆಯ ದಿವಸ ಆ ಸಮಯದಲ್ಲಿ ಬಂತು. ಆದರೆ Rules of Procedure ಬಗ್ಗೆ ನುಮಾರು 500ಷ್ಟು ತಿದ್ದುಪಡಿಗಳು ಬಂದಿರುವ ಕಾರಣ ಅದನ್ನು ಅಕ್ಟೋಬರ್ ಐದನೆಯ ತಾರೀಖಿನೊಳಗೆ ತೆಗೆದುಕೊಳ್ಳುವುದು ಅನಂಭವವೆನಿಸಿತು. ಈ ನಡುವೆ ಆರು ದಿನ ನೂಟ ಬಂದಿದೆ. ಈ ಆರು ದಿನಗಳಲ್ಲಿ ಮೂರು ದಿನ ಮಂತ್ರಿಗಳೆಲ್ಲರೂ ದನರಾಪ್ರಯುಕ್ತ ಮೈಸೂರಿಗೆ ಹೋಗುವವರಿದ್ದಾರೆ. ಮತ್ತು ಇತರ ಮೂರು ದಿವಸ ಕೆಲವು ಹಬ್ಬಗಳು ಬಂದ ಕಾರಣ ಸದಸ್ಯರೂ ಸಭೆಗೆ ಬರಲಕ್ಕಿಲ್ಲವೆಂದು ತಿಳಿದುಕೊಂಡು ಈ ಸಾರಿ Rules of Procedure ಬಗ್ಗೆ ಯಾವ ನಿರ್ಣಯವನ್ನೂ ತೆಗೆದುಕೊಳ್ಳುವ ಹಾಗಿಲ್ಲವೆಂದು ಮುಂದಕ್ಕೆ ತಳ್ಳಲಾಯಿತು. ಶ್ರೀ ಚನ್ನಬಸಪ್ಪನವರು ಹೇಳಿದ ಆವಶ್ಯಕತೆಯ ವಿಷಯವನ್ನು ನಾನೂ ಒಪ್ಪುತ್ತೇನೆ. ಆದರೆ ವಿಧಿಯಿಲ್ಲದೆ ಈ Business Advisory ಕಮಿಟಿಯಲ್ಲಿ ಈ ತೀರ್ಮಾನವನ್ನು ತೆಗೆದುಕೊಂಡು ಈಗ ಈ ವರದಿಯನ್ನು ತೆಗೆದುಕೊಳ್ಳಲಾಗಿದೆ. ಇದನ್ನು ಅವರು ಅಂಗೀಕಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಶಿವಪ್ಪ (ಚಿತ್ರದುರ್ಗ).—ನಿನ್ನೆಯ ದಿವಸ Rules of Procedure ಎಷ್ಟು ಮುಖ್ಯ ಎನ್ನುವುದನ್ನು ಸದಸ್ಯರೆನೇಕರು ತಮ್ಮ ಗಮನಕ್ಕೆ ತಂದಿದ್ದಾರೆ. ನಿನ್ನೆ ಈ ಬಗ್ಗೆ ನಡೆದ ಚರ್ಚೆಯನ್ನು ನೋಡಿದರೆ, ಸದಸ್ಯರು ಸ್ಪೇಟ್ಸ್ ರೀಆರ್ಗನೈಸೇಷನ್ ಕಾನೂನಿನ ಪ್ರಕಾರ ತಮಗೆ ಈ ಅಧಿಕಾರವನ್ನು ಚಲಾಯಿಸುವುದಕ್ಕೆ ಹಕ್ಕಿದೆಯೋ ಇಲ್ಲವೋ ಎಂಬುದನ್ನು ಕೂಡ ಪ್ರಶ್ನೆ ಮಾಡುವಷ್ಟು ಮಟ್ಟಿಗೆ ಹೋಗಿದ್ದಾರೆಂದು ಕಾಣುತ್ತದೆ. . . . .

Sri C. J. MUCKANNAPPA(Gubbi).—Sir, I rise to a point of order. Is the Hon'ble Member speaking on the Second Report of the Business Advisory Committee which is now before the House for discussion or is he advising us or asking the Chair as to what are the powers of the Chair? I cannot understand that.

Mr. SPEAKER.—He is doing all that.

Sri C. J. MUCKANNAPPA. Is he in order? He can only say whether we should accept the Second Report of the Business Advisory Committee or reject it. He can say that we should reject it, but he cannot ask as to what are the powers vested in the Chair. I cannot understand what he is doing. I, therefore, request the Chair to call the Member to order and to speak something relevant on the subject before the House.

Mr. SPEAKER.—Yesterday, there was a discussion about my powers. The whole point was then discussed threadbare and I have already given my ruling on that. It is no use for an Hon'ble Member to take it up again and make certain remarks. It is not fair for any Hon'ble Member to make remarks in that respect when the chapter has been closed. The Hon'ble Member Sri Sivappa is doing all those things, criticising the Second Report of the Business Advisory Committee, the powers that are vested in me, the duties of the Hon'ble Members and all

(Mr. SPEAKER)

that. He is trying to do all that simultaneously. He is a clever man and he puts things in a very clever manner. There is no doubt about that, but I do not want to take any action. I want to wait till the Hon'ble Member goes still too far astray.

3 P.M.

ಶ್ರೀ ಜಿ. ಶಿವಪ್ಪ.—ಈ ರೀತಿಯಾಗಿ ನಿನ್ನೆ ನಡೆದಂಥ ಚರ್ಚೆಯಲ್ಲಿ ಕಂಡುಬಂದಿದೆ. ಇವೊತ್ತು ಕೂಡ ಬಹು ತೇಕ ಸದಸ್ಯರು ಹೇಳಿರುವುದನ್ನು ಕೇಳಿ—ನನಗೇನೋ ಅಧ್ಯಕ್ಷರ ವಿಚಾರದಲ್ಲಿ ತುಂಬ ಗೌರವವಿದೆ. ತಾವು ಅಧ್ಯಕ್ಷರಾಗಿ ಇಲ್ಲಿರುವವರೆಗೂ ಅದೇ ಗೌರವವನ್ನು ಇಟ್ಟುಕೊಂಡಿರುವವನಾದರೂ, ಶ್ರೀ ಮುಕ್ಕಣ್ಣಪ್ಪ ನವರು ಹೇಳಿದುದರ ಮೇಲೆ ಸ್ವಲ್ಪ ಸಂಶಯ ಪಡಬೇ ಕಾಗಿದೆ. ನಾಲ್ಕನೆಯ ಅಕ್ಟೋಬರ್ ದಿವಸ Food situation in the State ಎಂದು. . . . .

ಅಧ್ಯಕ್ಷರು.—'Food and famine situation' ಎಂದು ತಾವು ತಿದ್ದಿಕೊಳ್ಳಬೇಕು.

ಶ್ರೀ ಜಿ. ಶಿವಪ್ಪ.—ಇಲ್ಲಿರುವುದು ಪುಡ್ ಎಂದು ಮಾತ್ರ. ಫ್ಯಾಮಿಕ್ ಎಂಬುದಿಲ್ಲ.

ಅಧ್ಯಕ್ಷರು.—Famine ಎಂದು ಹಾಕಿರಲಿಲ್ಲ. ಈಗ ಅದನ್ನು ಸೇರಿಸಿದೆ.

ಶ್ರೀ ಜಿ. ಶಿವಪ್ಪ.—ಆಗಬಹುದು. ಅಂತು ಈ ರೀತಿಯಾಗಿ insert ಮಾಡಿಸುವುದಕ್ಕೆ ಏನು ಕಾರಣವೊ! ಸರ್ಕಾರದ ಕಡೆಯಿಂದ ಬಂದಿದೆಯೋ ಅಥವಾ ಸದಸ್ಯರಿಂದಲೋ ಗೊತ್ತಿಲ್ಲ. ನನಗೆ ತಿಳಿದ ಹಾಗೆ ಟ್ರೆಜರಿ ಬೆಂಚಿನಿಂದ ಬಂದಹಾಗೆ ಕಾಣಲಿಲ್ಲ. ಏಕೆಂದರೆ ಪಾರ್ಟಿ ಮೀಟಿಂಗ್‌ಗಳು ದಿನವೂ ನಡೆಯುತ್ತಿವೆ. ಯಾವತ್ತೂ ಅದು ಚರ್ಚೆಗೆ ಬರದೆ ಇಂದು ಏಕಾಏಕಿಯಾಗಿ ಜರೂರಾಗಿ ಅನೇಕರಿಗೆ ಸಂಶಯಾತ್ಮಕ ವಾದ ರೀತಿಯಲ್ಲಿರುವಂಥ ಪ್ರಶ್ನೆಗಳನ್ನು ಬಿಟ್ಟು ಹೀಗೆ ಮಾರ್ಪಾಟು ಮಾಡಿರುವುದಕ್ಕೆ ಕಾರಣವೇನೋ ಗೊತ್ತಿಲ್ಲ.

ಅಧ್ಯಕ್ಷರು.—ಶ್ರೀ ಅಣ್ಣಾರಾವ್ ಅವರು ಇದಕ್ಕಾಗಲೇ ಉತ್ತರ ಕೊಟ್ಟಿದ್ದಾರೆ. ತಮಗೇ ಅವರು ಉತ್ತರ ಕೊಟ್ಟಿದ್ದು; ಈಗ ತಾವು ಅದರ ಮೇಲೆಯೇ ಮಾತನಾಡುತ್ತಿದ್ದೀರಿ.

ಶ್ರೀ ಜಿ. ಅಣ್ಣಾರಾವ್.—ಇವರಿಗೂ ನಾನು ಉತ್ತರ ಕೊಟ್ಟಿದ್ದೇನೆ, ಶ್ರೀಮಾರ್ ಚೆನ್ನಬಸಪ್ಪ ನವರಿಗೂ ಉತ್ತರ ಕೊಟ್ಟಿದ್ದೇನೆ. ಈಗಲಾದರೂ ಸಹ, ಈ ವಿಷಯ ಅನೇಕರಿಗೆ ಸಂಶಯವಾಗಿರ ತಕ್ಕ ಕಾರಣದಿಂದ, ಇದನ್ನು ನಿರ್ದಿಷ್ಟವಾಗಿ ಯಾವಾಗ ತೆಗೆದುಕೊಳ್ಳುತ್ತೀರಿ, ಯಾವಾಗ ಮುಗಿಸುತ್ತೀರಿ ಎಂದು ಒಂದು ತಾರೀಖನ್ನು ಗೊತ್ತುಮಾಡಿ ಸಭೆಗೆ ತಿಳಿಸಬೇಕೆಂದು ನಾನು ಅಳಿವಿನಯದಿಂದ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಯಾವ ಸಂಶಯವೋ ನನಗೆ ಅರ್ಥವಾಗಲಿಲ್ಲ; ಅಂಥ ಸಂಶಯ ಯಾರಿಗೆ ಇರುವುದಕ್ಕೂ ಅವಕಾಶವಿಲ್ಲ. ಆದ್ದರಿಂದ ಏನೂ ಇಲ್ಲದಿದ್ದರೂ ಸಂಶಯ ಪಡುವ ಸ್ವಭಾವದವರಿಗೆ ಸಂಶಯ ಬಿಡಿಸುವುದಕ್ಕೆ ನನಗೆ ಶಕ್ಯವಿಲ್ಲ. ಶ್ರೀಮಾರ್ ಶಿವಪ್ಪನವರಿಗೆ ಒಂದು ವಿಷಯ ತಿಳಿಯ ಬಯಸುತ್ತೇನೆ. 'Food and famine situation in the State' ಎಂಬ ವಿಷಯವನ್ನು ಏಕೆ ನಾಲ್ಕನೆಯ ತಾರೀಖಿಗೆ ಹಾಕಿಕೊಂಡರೆಂಬುದನ್ನು ಸ್ವಲ್ಪ ಮಟ್ಟಿಗೆ ಅಗಲೇ ಮಾನ್ಯ ಸದಸ್ಯರು ತಿಳಿಸಿದ್ದಾರೆ. 28 ಜನ ರುಜುಮಾಡಿದ ಒಂದು ಅಡ್ಜೆರ್‌ಮೆಂಟ್ ಸೂಚನೆ ಕೊಟ್ಟಿರುವುದು ತಮಗೆ ತಿಳಿದಿರಲಿಕ್ಕಿಲ್ಲ. ಅದು ಈ ರೀತಿಯಿದೆ:

"That the business of the Mysore Legislative Assembly do stand adjourned to discuss a definite matter of public importance, of recent occurrence, of urgent nature, to discuss and decide that the public of the parts of Tumkur Kolar, Hassan, Mandya, Chitaldrug and Bellary Districts, some parts of Belgaum, *i.e.*, Raibag, Athani Taluka require adequate relief measures to relieve them of their difficulties on account of want of rainfall in those parts".

'Famine' ಬಗ್ಗೆ ಅವರು ಒಂದು ಪ್ರಶ್ನೆಯನ್ನು ಕೂಡ ಕೇಳಿದ್ದಾರೆ. ಕ್ಷಾಮಕ್ಕೂ, ಆಹಾರಕ್ಕೂ ಒಂದ ಕ್ಕೊಂದಕ್ಕೆ ಸಂಬಂಧವಿರುವುದರಿಂದ Business advisory ಕಮಿಟಿಯವರು ಈ ಪ್ರಶ್ನೆಯನ್ನು ಒಂದು ದಿನ ಚರ್ಚೆಗಿಟ್ಟುಕೊಳ್ಳೋಣ, ಯಾವ Adjournment Motion ಗಳೂ ಬೇಡವೆಂದು ಹೇಳಿ, ಈ ವಿಷಯವನ್ನು ನಾಲ್ಕನೆಯ ತಾರೀಖು ಇಟ್ಟುಕೊಳ್ಳಬಹುದೆಂದು ಗೊತ್ತು ಪಡಿಸಿದ್ದಾರೆ.

Sri H. M. CHANNABASAPPA.—Is there an adjournment motion?

ಅಧ್ಯಕ್ಷರು.—Adjournment Motion ಗಳನ್ನು ಅವರುಗಳು press ಮಾಡುವುದಿಲ್ಲದೆಂದು ಹೇಳಿದ್ದಾರೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚನ್ನಪಟ್ಟಣ).—ಈಗ ತಾವು 50 ಜನರು ರುಜು ಮಾಡಿ ಈ ಒಂದು ಸೂಚನೆಯನ್ನು ಕೊಟ್ಟಿರುವುದರ ಮೇಲೆ ಗೊತ್ತು ಮಾಡಿತೆಂದು ಹೇಳಿದಿರಿ.

ಅಧ್ಯಕ್ಷರು.—28 ಜನರು ರುಜು ಮಾಡಿದ್ದಾರೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಇಪ್ಪತ್ತೆಂಟೋ ಐವತ್ತೋ, ಅಂತೂ ಜಾಸ್ತಿಜನ ಮಾಡಿದ್ದಾರೆ, ಯಾರೂ Food situation ಮೇಲೆ ಚರ್ಚೆ ಮಾಡುವುದು ಬೇಡವೆನ್ನುವವರಿಲ್ಲ. ಅದಕ್ಕೆ ಪ್ರಾಮುಖ್ಯತೆ ಕೊಡ ಬೇಕೆಂದು ಹೇಳಿ Business Advisory ಕಮಿಟಿಯವರು ಗೊತ್ತು ಮಾಡಿದರು ಎಂದು ಹೇಳಿದಿರಿ. ಅದನ್ನು ನಾನು ಒಪ್ಪುತ್ತೇನೆ. ಆದರೆ ನಿನ್ನೆದಿವಸ ಈ ಸೆಭೆಯಲ್ಲಿ 28 ಜನರಿಗೂ ಹೆಚ್ಚಿಗೆ 190 ಜನರೂ ಒಮ್ಮತದಿಂದ Rules of Procedure ನ್ನು ಚರ್ಚೆಗಿಟ್ಟು ಕೊಳ್ಳಬೇಕು ಎಂದು ಒತ್ತಾಯ ಮಾಡಿದ್ದು ತಮ್ಮ ಗಮನಕ್ಕೆ ಬಂದಿರಬಹುದು. ಇಷ್ಟೊಂದು ಜನ ಸದಸ್ಯರು ಹೇಳಿದ್ದಕ್ಕೆ Business ಕಮಿಟಿಯವರು ಗಮನ ಕೊಡಬಾರದು, 28 ಜನರು ಸೂಚನೆ ಮಾಡಿದ್ದಕ್ಕೆ ಗಮನ ಕೊಡಬೇಕು ಎಂದು ಅವರ ಮನಸ್ಸಿಗೆ ಹೇಗೆ ಬಂತೋ? ಯಾರನ್ನೂ ಆಕ್ಷೇಪಣೆ ಮಾಡ ಬೇಕೆಂದು ಹೇಳುತ್ತಿಲ್ಲ. ಅಂತೂ ಶ್ರೀಮಾರ್ ಶಿವಪ್ಪ ನವರು ಸಂಶಯ, ಸಂಶಯ ಎಂದು ಹೇಳಿದುದರ ಮೇಲೆ ನನಗೂ ಸಂಶಯ ಬರುತ್ತದೆ.

ಅಧ್ಯಕ್ಷರು.—ಶ್ರೀಮಾರ್ ಅಣ್ಣಾರಾವ್ ಅವರು ಅದಕ್ಕೆ ಉತ್ತರ ಹೇಳಿದ್ದಾರೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಉತ್ತರ ಕೊಟ್ಟಿರ ಬಹುದು; ನಾನು ಆಗ ಇರಲಿಲ್ಲ. ನಾನೇನೂ ಹೇಳ ಬೇಕೆಂದಿರಲಿಲ್ಲವಾದರೂ ಶ್ರೀಮಾರ್ ಶಿವಪ್ಪನವರು

'ಸಂಶಯ, ಸಂಶಯ' ಎಂದು ಹೇಳಿದ್ದನ್ನು ಕೇಳಿ, ಏನೋ ಇದರಲ್ಲಿ ಇರಬೇಕು, 28 ಜನರು ಕೊಟ್ಟ ಸೂಚನೆಗೆ ಪ್ರಾಮುಖ್ಯತೆ ಕೊಟ್ಟು 128 ಜನ ಹೇಳಿದ್ದಕ್ಕೆ ಪ್ರಾಮುಖ್ಯತೆ ಕೊಡಲಿಲ್ಲವೆಂದು ತಿಳಿದು ಹೇಳುತ್ತಿದ್ದೇನೆ. ಈ ವಿಷಯದಲ್ಲಿ Business ಕಮಿಟಿಯಲ್ಲಿ ತಾವಿದ್ದು ಈರೀತಿ ತೀರ್ಮಾನ ಮಾಡುವುದಕ್ಕೆ ತಮಗೆ ಹಕ್ಕಿದ್ದರೆ ತಾವು ದಯವಿಟ್ಟು ಅಪ್ಪಣೆ ಕೊಡಿಸಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಲಿಂಗೇಗೌಡ (ಕನಕಪುರ).—ಅಧ್ಯಕ್ಷರೆ, Business Advisory ಕಮಿಟಿಯವರು ಒಂದು ದಿವಸ ಆಹಾರ ಮತ್ತು ಕ್ಷಾಮ ಪರಿಸ್ಥಿತಿ ಚರ್ಚೆಗಾಗಿ ಗೊತ್ತು ಮಾಡಿರುವುದು ಬಹಳ ಒಳ್ಳೆಯದು. ಏಕೆಂದರೆ ದೇಶದಲ್ಲಿ ಆಹಾರ ವಿಷಯ ಅಗತ್ಯವಾಗಿ ಚರ್ಚೆ ಮಾಡಬೇಕಾದ ವಿಷಯವಾಗಿದೆ. ಇದಕ್ಕೆ ಪಾರ್ಲಮೆಂಟಿನಲ್ಲಿ ಕೂಡ ಪ್ರತಿಯೊಂದು ಅಧಿವೇಶನದಲ್ಲಿಯೂ ಒಂದು ದಿವಸ ಗೊತ್ತುಮಾಡಬೇಕೆಂದು ಅಲ್ಲಿನ ಅಧ್ಯಕ್ಷರೂ ಇದಕ್ಕೆ ಅನುಮತಿ ಕೊಟ್ಟಿದ್ದಾರೆ. ಈ ಕಾರಣ, ಆ ಪದ್ಧತಿಯನ್ನು ಅನುಸರಿಸಿ ಅತ್ಯವಶ್ಯಕವಾದ ಆಹಾರದ ವಿಷಯದಲ್ಲಿ ಚರ್ಚೆ ಮಾಡಬೇಕೆಂಬುದು ಸೂಕ್ತವಾಗಿದೆ. ನಾನು ಕೂಡ ಈ ವಿಷಯವನ್ನು ಈ ಅಧಿವೇಶನದಲ್ಲಿ ಚರ್ಚೆಮಾಡುವುದನ್ನು ಒಪ್ಪುತ್ತೇನೆ. ಆದರೆ Rules of Procedure ವಿಷಯ ಈ ಸೆಷನ್ನಿನಲ್ಲಿ ಆಗಬೇಕಾದ್ದು ಆಗಲಿಲ್ಲ. ಅದು ಆಗದಿರುವುದಕ್ಕೆ ಕಾರಣವೇನೆಂಬುದನ್ನು ಅವರು ಹೇಳಿದರು, ನಿಜ. ಆದರೆ ಇದೆಲ್ಲಿ ಅನಿರ್ದಿಷ್ಟವಾಗಿ ಮುಂದೆ ಹೋಗುತ್ತದೋ ಎಂಬ ಅನುಮಾನ ಬಂದಿದೆ. ಈ ವಿಷಯವನ್ನು ಮುಂದೆ ಯಾವಾಗ ಚರ್ಚೆಗೆ ತೆಗೆದುಕೊಳ್ಳಬೇಕೆಂಬುದನ್ನು ನಿಗದಿಮಾಡಲಿಲ್ಲವೆಂದು ಗೊತ್ತಾಗುತ್ತದೆ. ಚುನಾವಣೆಯನ್ನು ಈ ಸಂದರ್ಭದಲ್ಲಿ ನಡೆಸಿಬಿಟ್ಟು ಈ ವಿಷಯದ ಚರ್ಚೆಯನ್ನು ಹೀಗೆಯೇ ಮುಂದುವರಿಸಿಕೊಂಡು ಎಲ್ಲಿ ಹೋಗುತ್ತಾರೋ, ಅದಕ್ಕಾಗಿಯೇ ಹೀಗೆ delay ಮಾಡುತ್ತಿದ್ದಾರೋ ಎಂಬ ಅನುಮಾನ ಬಂದಿದೆ ಇದನ್ನು ತಾವು ಪರಿಹಾರ ಮಾಡಬೇಕು.

ಅಧ್ಯಕ್ಷರು.—ಶ್ರೀಮಾನ್ ಪುಟ್ಟರಾಮಯ್ಯನವರು, ಶ್ರೀಮಾನ್ ಅಣ್ಣಾರಾಪ್ಪರವರು ಉತ್ತರ ಕೊಟ್ಟಾಗ ತಾವಿರಲಿಲ್ಲವೆಂದು ತಿಳಿಸಿದರು. ಅವರಿಗೆ ನಾನು ಹೇಳಬಯಸುತ್ತೇನೆ. Business Advisory Committee ಚೇರ್ಮನ್ ಆಗಿದ್ದು, ನಾನು ಈ ವಿಷಯದಲ್ಲಿ ಎಷ್ಟು ಕಾತರತೆಯುಳ್ಳವನಾಗಿದ್ದೇನೆಂಬುದನ್ನು ನಾನು ಹೇಳಬೇಕಾಗಿಲ್ಲ. ಹೇಗೇ ಆದರೂ ಒಂದೆರಡು ದಿವಸ ಇದಕ್ಕೆ ಚರ್ಚೆಗೆ ಕೊಡಬೇಕೆಂದಿದ್ದರೂ ಆಗಲಿಲ್ಲ. ಈ ಅಧಿವೇಶನದ ಕಾರ್ಯಕಲಾಪಗಳು ಏಳನೆಯ ತಾರೀಖಿಗೆ ಮುಗಿಯಲೇಬೇಕೆಂದಿದೆ. ಆದ್ದರಿಂದ ವಂದಿನ ಸಭೆಯ ಅಧಿವೇಶನದಲ್ಲಿ ತೆಗೆದುಕೊಳ್ಳಬೇಕೆಂದು ಮಾಡಿದೆ. ಆಮೇಲೆ ನಾನಾ ಕಮಿಟಿಗಳನ್ನು ಮಾಡಬೇಕೆಂದು ಏನು ಗೊತ್ತುಮಾಡಿದೆಯೋ, ಅದರಲ್ಲೂ ನನ್ನದಾದ ಅಭಿಪ್ರಾಯವೇನೂ ಇಲ್ಲ. ಪ್ರತಿಯೊಂದನ್ನೂ ರೂಲ್ಸ್ ಕಮಿಟಿಯವರು ಏನು ಶಿಫಾರಸ್ಸು ಮಾಡಿದ್ದಾರೆ, ಎಲ್ಲಿ elections ಇರಬೇಕೆಂದು ಹೇಳಿದ್ದಾರೆ ಅದರಂತೆಯೇ ಮಾಡಿದ್ದಾಗಿದೆ. ಈಗ ಕೆಲವು ಕಮಿಟಿಗಳನ್ನು ಮಾಡಲೇ ಬೇಕಾಗಿದ್ದರಿಂದ ಮಾಡಿದ್ದಾಗಿದೆ. ಮುಂದಿನ ಅಧಿವೇಶನದಲ್ಲಿ ಎಷ್ಟು ತೀವ್ರವಾಗಿ ಎಂದರೆ ಅಷ್ಟು ತೀವ್ರವಾಗಿ ತೆಗೆದುಕೊಳ್ಳೋಣ; ಒಂದೆರಡು ದಿವಸಗಳು ಚರ್ಚೆಮಾಡಬೇಕಾಗುತ್ತದೆ. ಇದರ ಮೇಲೆ 500 ಕ್ಕೂ ಮೇಲ್ಪಟ್ಟು ತಿದ್ದುಪಡಿಗಳು ಬಂದಿವೆ ಎಂದು ಕಾಣುತ್ತದೆ. ಅವುಗಳಲ್ಲಿ ಯಾವುವು ಮುಖ್ಯ ಯಾವುವು ಅಲ್ಲ ಎಂಬುದನ್ನು ಈಗ ಹೇಳುವುದಕ್ಕಾಗುವುದಿಲ್ಲ. ಮುಂದೆ ನಿಮ್ಮ ನಿಮ್ಮಲ್ಲೇ ಚರ್ಚೆಮಾಡಿ ಅದನ್ನು ತೀರ್ಮಾನ ಮಾಡಬಹುದು. ಬಿಸಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಯಾವುದನ್ನು ತೆಗೆದುಕೊಳ್ಳಬಾರದು ಎಂದು ವಿಚಾರಮಾಡಿ ಒಂದು ತೀರ್ಮಾನಕ್ಕೆ ಬರಲಾಗಿದೆ. ಮಸಿಬಲ್ಸ್ ಮುಂದುವರೆಸಬೇಕೆಂಬ ಇಚ್ಛೆ ಯಾರಿಗೂ ಇಲ್ಲ.

ಎರಡನೆಯದಾಗಿ ರೂಲ್ ಮೇಕಿಂಗ್ ಕಮಿಟಿ ವರದಿಯ ಚರ್ಚೆಗೆ ಒಂದು ದಿವಸ ಸಾಕೆಂದು ಹೇಳುತ್ತಾರೆ. ಆದರೆ ಅದರಂತೆ ನಡೆದರೆ ಅಭಾಸವಾಗುತ್ತದೆ. ಅದಕ್ಕೆ ಮೂರುದಿವಸವಾದರೂ ಬೇಕಾಗುತ್ತದೆ ಜೊಂಬಾಯಿ ಅಸೆಂಬ್ಲಿಯಲ್ಲೂ ಎರಡುದಿವಸ ಚರ್ಚೆ ನಡೆದಿದೆ. ಇಲ್ಲಿ ತಿದ್ದುಪಡಿಗಳು ಜಾಸ್ತಿಯಾಗಿರುವುದರಿಂದ ಮೂರು ದಿವಸವಾದರೂ ಬೇಕಾಗುತ್ತದೆ. ಅದಕ್ಕೆ ಸಾಕಷ್ಟು ಕಾಲಾವಕಾಶ ಕೊಡುತ್ತೇನೆ. ಈಗ ಅದಕ್ಕೆ ಅವಕಾಶ ಕೊಡಲು ಸಾಧ್ಯವಿಲ್ಲ. ಸಾಕಷ್ಟು ಕಾಲಾವಕಾಶ ಅದರ ಚರ್ಚೆಗೆ ಕೊಡದಿದ್ದರೆ ಬೆಲೆ ಬರುವುದಿಲ್ಲ.

ಆಮೇಲೆ ಆಹಾರ ಸಮಸ್ಯೆಯ ವಿಚಾರದಲ್ಲಿ ಕೇಂದ್ರ ಸರ್ಕಾರದವರು ಅಕ್ಟೋಬರ್ ತಿಂಗಳಿನಿಂದ ವೆಸ್ಟರ್ನ್ ರಿಗೆ ಅಕ್ಕಿ ಕೊಡುವುದಿಲ್ಲವೆಂದು ಹೇಳಿದ್ದಾರೆ. ಈ ವಿಚಾರ ಬಹಳ ಸೀರಿಯಸ್ಸಾಗಿದೆ. ನಮ್ಮ ಅಭಿಪ್ರಾಯವನ್ನು ಕೇಂದ್ರಕ್ಕೆ ತಿಳಿಸಬೇಕಾಗಿದೆ. ಹಾಗಿರುವಾಗ ಅವಕಾಶ ಕೊಟ್ಟಿರುವುದನ್ನು ತಾವು ಸ್ವಾಗತಿಸಬೇಕು. ಮೈಸೂರಿನಲ್ಲಿ ಆಹಾರದ ಪರಿಸ್ಥಿತಿ ಬಹಳ ಕಠಿಣವಾಗಿದೆ; ಕೆಲವು ಭಾಗಗಳಲ್ಲಿ ಮಳೆಯಿಲ್ಲದೆ ಕಷ್ಟವಾಗಿದೆ. ಮಳೆಸರಿಯಾಗಿ ಆಗದಿದ್ದರೆ ಸಾಕಷ್ಟು ಬೆಳೆಯಾಗುವುದಿಲ್ಲ. ಈ ವಿಷಯಗಳನ್ನೆಲ್ಲಾ ಬಿಸಿನೆಸ್ ಅಡ್ವೈಜರಿ ಕಮಿಟಿ ಚರ್ಚೆಮಾಡಿ ಇದಕ್ಕೆ ಮಹತ್ವ ಕೊಟ್ಟಿದೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಒಂದು ಸಲಹೆ ಮಾಡಬೇಕಾಗಿದೆ. ತಾವು ಹೇಳುವುದೆಲ್ಲಾ ಸೂಕ್ತವಾಗಿದೆ. 5ನೆಯ ತಾರೀಖಾದಮೇಲೆ ತಾವು ಬೇರೆಕಡೆಗೆ ಹೋಗಬೇಕೆಂದು ಹೇಳುತ್ತೀರಿ. ಯಾವಾಗಲಾದರೂ ಮೂರುದಿವಸ ಕುಳಿತು ತೀರ್ಮಾನ ಮಾಡಲೇಬೇಕು. ತಾವು ಹಾಜರಿಲ್ಲದಿದ್ದರೂ ಹೇನಲ್ ಆಫ್ ಥೇರ್ಮನ್ ಇದೆ. ಆ ಹೇನಲ್‌ನ ಥೇರ್ಮನ್ನರು ಕಾರ್ಯಕಲಾಪ ನಡೆಸುವುದಕ್ಕೆ ಸಾಧ್ಯವಿದೆಯೆಂಬುದು ನನ್ನ ಅಭಿಪ್ರಾಯ. ಒಂದು ವೇಳೆ ಅವರು ಕೆಲಸಕಾರ್ಯನಡೆಸುವುದಕ್ಕಾಗುವುದಿಲ್ಲವೆಂದು ತಾವೇನಾದರೂ ಅಭಿಪ್ರಾಯಪಡುವುದಾದರೆ ಆ ವಿಷಯ ನಾನು ಪ್ರಸ್ತಾಪ ಮಾಡುವುದಿಲ್ಲ, ಅದಕ್ಕೆ ಒಪ್ಪುತ್ತೇನೆ. ಆ ಹೇನಲ್‌ಗೆ ಶಕ್ತಿಯಿದೆ ಎಂದು ಭಾವಿಸುವುದಾದರೆ ಈ ಸಭೆಯನ್ನು ಅಕ್ಟೋಬರ್ 5ನೆಯ ತಾರೀಖಿನಿಂದ ಮೂರುದಿವಸ ಮುಂದುವರಿಸಿ ಅನಂತರ ಮುಕ್ತಾಯಮಾಡಲು ತೊಂದರೆಯೇನೂ ಇರುವುದಿಲ್ಲ.

ಅಧ್ಯಕ್ಷರು.—ತಮ್ಮ ಸಲಹೆಯಲ್ಲಿ ಬಹಳ ಅಪಾಯವಿದೆ. ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಕಾನ್ಫರೆನ್ಸ್‌ಗೆ ಹೋದಾಗ ಹೇನಲ್ ಆಫ್ ಥೇರ್ಮನ್ ಈ ಸಭೆ ನಡೆಸುವುದನ್ನು ನಾನು ಎಲ್ಲೂ ಕಾಣುಲಿಲ್ಲ. ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಆರ್ಜೆಂಟ್ ಕೆಲಸದಮೇಲೆ ಯಾವಾಗಲಾದರೂ ಸ್ವಲ್ಪಕಾಲ ಮಾತ್ರ ಇಲ್ಲದಿದ್ದರೆ ಆಗ ಮಾತ್ರ ಹೇನಲ್ ಸಭೆ ನಡೆಸಲು ಅವಕಾಶ ಇರುತ್ತದೆ. ಅವರೇ ದಿವಸಗಟ್ಟಲೆ ಈ ಸಭೆ ನಡೆಸುವುದಿಲ್ಲ. That will amount to dereliction of duty on the part of the presiding officer.

ಶ್ರೀ ಜಿ. ಅಣ್ಣಾರಾವ್.—ಒಂದು ಸೂಚನೆ ಕೊಡುತ್ತೇನೆ. ಬಿಸಿನೆಸ್ ಅಡ್ವೈಜರಿ ಕಮಿಟಿ ಜವಾಬ್ದಾರಿ ತೆಗೆದುಕೊಂಡು ಒಂದು ನಿರ್ಣಯಮಾಡಿರುವುದೇನೋ ಸರಿಯಾಗಿದೆ. ನವೆಂಬರ್ ಅಧಿವೇಶನದಲ್ಲಿ ರೂಲ್ಸ್ ಕಮಿಟಿಯ ವರದಿಯನ್ನು ಚರ್ಚೆಗೆ ತೆಗೆದುಕೊಳ್ಳುವುದಾದರೆ ಸರ್ಕಾರಿ ಕೆಲಸ ಲಿಮಿಟ್‌ಮಾಡಬೇಕಾಗುತ್ತದೆ ಅಥವ ಅಧಿವೇಶನವನ್ನು ಮುಂದುವರಿಸಬೇಕಾಗುತ್ತದೆ. ಈಗ ಸರ್ಕಾರಕ್ಕೆ ಬರುವ ತೆರಿಗೆಯು ತೆರಿಗೆತರತಕ್ಕ ಮನೂದೆಗಳನ್ನು ಜಾಗ್ರತೆ ಈ ಸಭೆ ಅಂಗೀಕಾರಮಾಡದಿದ್ದರೆ ಕಡಮೆಯಾಗಬಹುದೆಂದು ಅದಕ್ಕೆ ಪ್ರಾಶಸ್ತ್ಯನೀಡಿ ಮೊದಲು ಆ ಸಂಬಂಧವಾದ ಮನೂದೆಗಳನ್ನು ಅಂಗೀಕಾರ ಮಾಡಲಾಯಿತು. ಒಂದು ವೇಳೆ ಈಗಿನ ಅಧಿವೇಶನವನ್ನು ಮುಂದುವರಿಸುವುದಕ್ಕಾಗದಿದ್ದರೆ ಪುನಃ ರೂಲ್ಸ್ ಕಮಿಟಿಯ ವರದಿಯ ಚರ್ಚೆಗಾಗಿಯೇ ಅಕ್ಟೋಬರಿನಲ್ಲಿ ಮತ್ತೊಂದು ಅಧಿವೇಶನ ನಡೆಸುವುದು ಸೂಕ್ತ. ಆಗ ರೂಲ್ಸ್ ಆಫ್‌ಪ್ರೊಸೀಜರ್ ಅಂಗೀಕರಿಸಿ ಅನಂತರ ಸರ್ಕಾರಿ ಕಾರ್ಯಕಲಾಪವೇಕಾದರೆ ತೆಗೆದುಕೊಳ್ಳಬಹುದು. ರೂಲ್ಸ್ ಆಫ್ ಪ್ರೊಸೀಜರ್ ಜಾಗ್ರತೆ ಗೊತ್ತುಮಾಡುವುದು ಅತ್ಯಗತ್ಯವೆಂದು ಸಾಮಾನ್ಯವಾಗಿ ಎಲ್ಲಾ ಸದಸ್ಯರು ಹೇಳಿದ್ದಾರೆ.

ಅಧ್ಯಕ್ಷರು.—ಅದನ್ನು ಒಪ್ಪುತ್ತೇನೆ. ಆದರೆ ಅಕ್ಟೋಬರ್ ತಿಂಗಳಲ್ಲಿ ಮತ್ತೆ ಅಧಿವೇಶನ ನಡೆಸಲು ಸಾಧ್ಯವಾಗುವುದಿಲ್ಲ. ಪ್ರಿಸೈಡಿಂಗ್‌ಆಫೀಸರ್ಸ್ ಕಾನ್ಫರೆನ್ಸ್ ಮುಗಿಯುವ ವೇಳೆಗೆ 23ನೆಯ ತಾರೀಖಾಗಬಹುದು. ಆಮೇಲೆ ಬೇರೆ ಪ್ರೋಗ್ರಾಂ ಇದೆ. ಕಾರಣ ನವೆಂಬರಿನಲ್ಲಿ ಅಧಿವೇಶನ ಕರೆದರೆ ಮೊದಲು ರೂಲ್ಸ್‌ಗೆ ಸಂಬಂಧಪಟ್ಟ ಕೆಲಸವನ್ನು ತೆಗೆದುಕೊಂಡು ಮುಗಿಸೋಣ.

ಶ್ರೀ ಜಿ. ಅಣ್ಣಾರಾವ್.—ಸರ್ಕಾರಿ ಕೆಲಸ ನೋಡಿಕೊಂಡು ಅಧಿವೇಶನ ನಡೆಸಬಹುದು. ಆದರೆ ರೂಲ್ಸ್‌ವಿಚಾರ ನವೆಂಬರ್ ಅಧಿವೇಶನಕ್ಕೆ ಮುಂದು ವರಸಿದರೆ ಸರ್ಕಾರಿ ಕೆಲಸದ ಜೊತೆಗೆ ಇದೊಂದು ಹೊರೆಯಾಗಬಹುದು. ಅದಕ್ಕೆ ಅವಕಾಶವಿಲ್ಲದಂತೆ ನವೆಂಬರ್ ಅಧಿವೇಶನಕ್ಕೆ ಮುಂಚೆಯೇ ಒಂದು ಅಧಿವೇಶನ ನಡೆಸಿ ರೂಲ್ಸ್ ಆಫ್ ಪ್ರೊಸೀಜರ್ ಅಂಗೀಕರಿಸಿದರೆ ಒಳ್ಳೆಯದು. ಸರ್ಕಾರಿಕೆಲಸಕ್ಕೂ ರೂಲ್ಸ್ ವಿಚಾರಕ್ಕೂ ಸಂಬಂಧವಿಲ್ಲ. ಆದ್ದರಿಂದ ಸಭೆ ಒಪ್ಪಿದರೆ ನವೆಂಬರ್‌ತಿಂಗಳ ಅಧಿವೇಶನಕ್ಕೆ ಮುಂಚೆ ರೂಲ್ಸ್ ಅಂಗೀಕಾರವಾಗಲು ಒಂದು ಅಧಿವೇಶನ ಕರೆಯುವುದು ಸೂಕ್ತವಾಗಿ ಕಾಣುತ್ತದೆ.

ಅಧ್ಯಕ್ಷರು.—ಮತ್ತೊಂದು ಸಲ ಬಿಸಿನೆಸ್ ಅಡ್ವೈಜರಿ ಕಮಿಟಿ ಕೂಡಿಸಿ ಮುಖ್ಯ ಮಂತ್ರಿಗಳನ್ನು ವಿಚಾರ ಮಾಡಿ ಒಂದು ತೀರ್ಮಾನಮಾಡೋಣ.

ಶ್ರೀ ಎಂ. ರಾಮಪ್ಪ (ಹರಿಹರ).—ಖಾಸಗಿ ಕಾರ್ಯಕಲಾಪಗಳಿಗೆ ಮೂರುದಿವಸಗಳ ಅವಕಾಶ ಮಾಡಿದೆ. ಆದರೆ ಕಾಲ ನಿಗದಿಮಾಡಿಲ್ಲ. ನಿರ್ಣಯಗಳಲ್ಲಿ ಎರಡು ತರಹ ಇರುತ್ತದೆ; ಲೋಕಲ್ ಅಫೇರ್ಸ್‌ಗೆ ಸಂಬಂಧಪಟ್ಟಿರುವುದು ಮತ್ತು ಸಾಮಾನ್ಯವಾಗಿ ದೇಶಕ್ಕೆಲ್ಲಾ ಅನ್ವಯವಾಗುವುದು. ಆದ್ದರಿಂದ ಲೋಕಲ್ ನೇಚರ್ ಇರುವುದಕ್ಕೆ ಕಡಮೆಕಾಲ ಕೊಟ್ಟು ಜನರಲ್ ಇಂಪಾರ್ಟೆನ್ಸ್ ಇರುವ ನಿರ್ಣಯಗಳಿಗೆ ಹೆಚ್ಚು ಕಾಲ ಕೊಟ್ಟರೆ ಒಳ್ಳೆಯದೆಂದು ಸಲಹೆಮಾಡುತ್ತೇನೆ.

ಅಧ್ಯಕ್ಷರು.—ಆ ಬಿಸಿನೆಸ್ ಅಡ್ವೈಜರಿ ಕಮಿಟಿಯ ಕರ್ತವ್ಯವಲ್ಲ, ಖಾಸಗಿ ಕಾರ್ಯಕಲಾಪಗಳ ವಿಚಾರದಲ್ಲಿ ಹಾಗೆ ಗೊತ್ತುಮಾಡುವುದು ಆ ಸಮಿತಿಯ ಕರ್ತವ್ಯವಲ್ಲ; ಸರ್ಕಾರಿ ಕಾರ್ಯಕಲಾಪಗಳ ವಿಷಯವನ್ನು ಗೊತ್ತುಮಾಡುವುದಕ್ಕೆ ಮಾತ್ರ ಆ ಸಮಿತಿಗೆ ಅವಕಾಶವಿದೆ. ತಾವು ಹೇಳುವ ಸೂಚನೆಯನ್ನು ಲಕ್ಷ್ಯದಲ್ಲಿಟ್ಟುಕೊಂಡು ನಾನು ವಿಚಾರಮಾಡುತ್ತೇನೆ. ಆ ವಿಚಾರದಲ್ಲೇನು ಮಾಡಬೇಕೆಂಬುದನ್ನು ಆಲೋಚನೆಮಾಡೋಣ.

The question is :

"That this Assembly agrees with the Second Report of the Business Advisory Committee."

The motion was adopted.

The House adjourned for lunch at Twenty Minutes past Three of the Clock and re-assembled again at Fifty Minutes past Three of the Clock.

[MR. SPEAKER in the Chair]

MYSORE UNIVERSITY (SECOND AMENDMENT) BILL, 1957.

Introduction.

Smt. GRACE TUCKER (Deputy Minister for Education).—Sir, I introduce . . . .

Sri C. J. MUCKANNAPPA (Gubbi).—Sir, I rise to a point of order.

Mr. SPEAKER.—Point of order in the vacuum ?

Sri C. J. MUCKANNAPPA.—About the introduction of the Bill.

Mr. SPEAKER.—Let her introduce the Bill.

Smt. GRACE TUCKER.—Sir, I introduce the Mysore University (Second Amendment) Bill, 1957, which has been published in the *Mysore Gazette* under rule 48 of the Rules of Procedure and Conduct of Business in the Mysore Legislative Assembly.

Sri C. J. MUCKANNAPPA.—My point of order is this. In the first Report of the Business Advisory Committee introduction of this Bill has not been included. The second Report of the Business Advisory Committee came before the House and it has just been approved. Under rule 40 no other item can have priority over the business of the House. Hence I request the Chair to give a ruling because except taking up the Mysore Irrigation (Levy of Betterment Contribution and Water Rate) Bill, 1957, as reported by the Select Committee, nothing can be discussed.